ವಿಧವಾ ಮತ್ತು ವೃದ್ಧಾಪ್ಯ ವೇತನದ ಬಗ್ಗೆ:

1265 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವಿಧವಾ ವೇತನ ಹಾಗೂ ವೃದ್ಧಾಪ್ಯ ವೇತನ ಆಗಾಗ ನಿಂತು ಹೋಗಿ ಬಡವರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಮೂಡಿಗೆರೆ ತಾಲ್ಲೂಕಿನಲ್ಲಿ ಎಷ್ಟು ಜನರ ವೃದ್ಧಾಪ್ಯವೇತನ ಹಾಗೂ ವಿಧವಾ ವೇತನ ನಿಂತು ಹೋಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ವೃದ್ಧಾಪ್ಯ ವೇತನ ಹಾಗೂ ವಿಧವಾ ವೇತನ ನಿಂತು ಹೋದ ಬಗ್ಗೆ ಅರ್ಜಿದಾರರಿಂದ ಅರ್ಜಿ ಬಂದಲ್ಲಿ, ಅದನ್ನು ಪಾವತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದಾಗ್ಯೂ ಈ ವೇತನವನ್ನು ಸುಲಭವಾಗಿ ಪಾವತಿ ಮಾಡಲು ಅನುಕೂಲವಾಗುವಂತೆ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಖಾತೆ ತೆರೆಯಲು ಸೂಚಿಸಲಾಗುತ್ತಿದೆ.

ಇ)

ವೃದ್ಧಾಪ್ಯ ವೇತನ	- 107
ವಿಧವಾ ವೇತನ	- 87

ಮೇಲ್ಕಂಡ ಪ್ರಕರಣಗಳು ಖೋಟಾ ಎಂದು ಕಂಡು ಬಂದುದರಿಂದ ಅವುಗಳಿಗೆ ಪಾವತಿಯನ್ನು ನಿಲ್ಲಿಸಲಾಗಿದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಟಿ. ಟಿ. ರೇಕಾರ್ಡ್‌ಗಳ ಬಗ್ಗೆ.

750 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಸುಮಾರು 80ನೇ ಇಸವಿಯಿಂದ ಇಲ್ಲಿಯತನಕ ಎಷ್ಟು ಟಿ.ಟಿ.ರೇಕಾರ್ಡ್ ಮಾಡಲಾಗಿದೆ;(ಪ್ರತಿವರ್ಷದ ಪಟ್ಟಿ ಕೊಡುವುದು);

ಆ) ಈ ಟಿ.ಟಿ. ರೇಕಾರ್ಡ್‌ನಲ್ಲಿ ದುರ್ಬಲ ಹಾಗೂ ಹರಿಜನ-ಗಿರಿಜನರ ರೇಕಾರ್ಡ್‌ಗಳು ಎಷ್ಟಿವೆ; ಇತರೆ ವರ್ಗದ ರೇಕಾರ್ಡ್‌ಗಳು ಎಷ್ಟಿವೆ?

ಇ) ಟಿ. ಟಿ. ರೇಕಾರ್ಡಿನ ಆಧಾರದ ಮೇಲೆ ಮಂಜೂರಾದವು ಎಷ್ಟು;ಯಾವ ಯಾವ ವರ್ಗದವರಿಗೆ ಮಂಜೂರಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):

ಅ) 1246 (ವರ್ಷವಾರು ಪಟ್ಟಿಯನ್ನು ಲಗತ್ತಿಸಲಾಗಿದೆ)

ಆ) ಒಟ್ಟು 1246 ಟಿ. ಟಿ. ರೇಕಾರ್ಡ್‌ಗಳ ಪೈಕಿ 226 ಹರಿಜನ-ಗಿರಿಜನರ ರೇಕಾರ್ಡ್‌ಗಳು, 74 ದುರ್ಬಲ ವರ್ಗದವರ ಮತ್ತು 946 ಇತರೆ ವರ್ಗದವರ ರೇಕಾರ್ಡ್‌ಗಳು ಇವೆ.

ಇ) ಈ ಟಿ. ಟಿ. ರೇಕಾರ್ಡ್‌ಗಳ ಆಧಾರದ ಮೇಲೆ 673 ಜನಗಳಿಗೆ ಒಟ್ಟು 129 ಎಕರೆ 25 ಗುಂಟೆ ಸರ್ಕಾರಿ ಜಮೀನನ್ನು ಮಂಜೂರು ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.